## ॥ ಎಲ್ಲರು ಮಾಡುವುದು ಹೊಟ್ಟೆಗಾಗಿ ॥

ಎಲ್ಲರು ಮಾಡುವುದು ಹೊಟ್ಟೆಗಾಗಿ ।
ಗೇಣು ಬಟ್ಟೆಗಾಗಿ ॥ ಪ ॥

ಸಿರಿ । ವಲ್ಲಭನ ಭಜಿಸುವುದು ಮುಕ್ತಿಗಾಗಿ ॥ ಅ ಪ ॥

ಪಲ್ಲಕ್ಕಿಯ ಹೊರುವುದು ಹೊಟ್ಟೆಗಾಗಿ ದೊಡ್ಡ ।
ಮಲ್ಲರೊಡನಾಡುವುದು ಹೊಟ್ಟೆಗಾಗಿ ॥
ಸುಳ್ಳಾಗಿ ಪೊಗಳುವುದು ಹೊಟ್ಟೆಗಾಗಿ ।
ಸಿರಿ ವಲ್ಲಭನ ಧ್ಯಾನವು ಮುಕ್ತಿಗಾಗಿ ॥ ೧ ॥

ದೊರೆತನ ಮಾಡುವುದು ಹೊಟ್ಟೆಗಾಗಿ ।
ಕರಿ । ತುರಗವೇರುವುದು ಹೊಟ್ಟೆಗಾಗಿ ॥
ದುರಿತವ ಮಾಡುವುದು ಹೊಟ್ಟೆಗಾಗಿ ।
ಸಿರಿ । ಹರಿಯ ಭಜಿಸುವುದು ಮುಕ್ತಿಗಾಗಿ ॥ ೨ ॥

ಬೆಟ್ಟವ ಹೊರುವುದು ಹೊಟ್ಟೆಗಾಗಿ ।
ಗಟ್ಯಾಗಿ ಕೂಗುವುದು ಹೊಟ್ಟೆಗಾಗಿ ॥
ದಿಟ್ಟವಾಗಿ ನಮ್ಮ ಶ್ರೀ ಪುರಂದರ ।
ವಿಠಲನ ಧ್ಯಾನವು ಮುಕ್ತಿಗಾಗಿ ॥ ೩ ॥